2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ,
ಚಿಕ್ಕಮಗಳೂರು

<u>ಸತ್ರ ಮೊಕದ್ದಮೆ ನಂಃ 128/2017</u>

| | | |
|---|---|---|
| ಸಾಕ್ಷಿದಾರರ ಹೆಸರು | - ಸಿದ್ದಲಿಂಗಪ್ಪ | ಪಿಡಬ್ಲೂ -2 |
| ತಂದೆಯ ಹೆಸರು | - ಸದಾಶಿವಪ್ಪ | ಸಿಡಬ್ಲೂ -5 |
| ವಯಸ್ಸು | - 44 ವರ್ಷ | |
| ಉದ್ಯೋಗ | - ಕೂಲಿ | |
| ವಾಸ ಸ್ಥಳ | - ಉದ್ದೇಬೋರನಹಳ್ಳಿ | |

ದಿನಾಂಕಃ 21.06.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ : ಸರ್ಕಾರಿ ಅಭಿಯೋಜಕರಿಂದ-</u>

1. ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿ ಪರಿಚಯವಿಲ್ಲ. ಚಾಸಾ.2 ರವರು ಪರಿಚಯವಿದ್ದು, ಅವರು ಈಗ ತೀರಿಹೋಗಿದ್ದಾರೆ. ಚಾಸಾ.6 ರವರು ಪರಿಚಯವಿದ್ದು, ಅವರು ಈಗ ತೀರಿಹೋಗಿದ್ದಾರೆ.

2. ಈಗ ತೋರಿಸಿದ ದಾಖಲೆಯಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ.6 ಎಂದು ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು.

3. ಸುಮಾರು ಮೂರು ವರ್ಷದ ಹಿಂದೆ ಉದ್ದೇಬೋರನಹಳ್ಳಿಯ ರಸ್ತೆಯಲ್ಲಿ ನಿಪಿ.6 ಕ್ಕೆ ಪೋಲೀಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ನಿಪಿ.6 ರಲ್ಲಿ ಬರೆದ ವಿಷಯ ಗೊತ್ತಿಲ್ಲ. ಪೋಲೀಸರು ನನಗೆ ನಿಪಿ.6 ರಲ್ಲಿ ಬರೆದ ವಿಷಯವನ್ನು ಓದಿ ಹೇಳಿಲ್ಲ. ನಿಪಿ.6 ಕ್ಕೆ ನನ್ನ ಜೊತೆ ಯಾರು ಸಹಿ ಮಾಡಿದ್ದಾರೆ ಗೊತ್ತಿಲ್ಲ. ಈಗ ನೋಡುತ್ತಿರುವ ಪೋಟೋದಲ್ಲಿ ನನ್ನ ಇರುವಿಕೆ

ಕಂಡುಬರುತ್ತದೆ. ಸದರಿ ಫೋಟೋವನ್ನು ನಿಪಿ.2 ಎಂದು ಈಗಾಗಲೇ ಗುರುತಿಸಲಾಗಿದೆ. ಯಾವ ಉದ್ದೇಶಕ್ಕಾಗಿ ಪೋಲೀಸರು ನಿಪಿ.2 ನ್ನು ತೆಗೆದಿದ್ದಾರೆ ಗೊತ್ತಿಲ್ಲ. ಯಾರ ಮನೆಯಲ್ಲಿ ನಿಪಿ.2 ನ್ನು ತೆಗೆಯಲಾಗಿದೆ ಗೊತ್ತಿಲ್ಲ, ಆದರೆ ಸದರಿ ಮನೆ ಪೋಸ್ಟ ಆಪೀಸಿನವರಿಗೆ ಸೇರಿದ ಮನೆಯಾಗಿರುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅಭಿಯೋಜಕರು ಅನುಮತಿ ಕೇಳಿರುತ್ತಾರೆ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-

4. ದಿಃ 03.06.2016 ರಂದು ಪೋಲೀಸರು ಸಂಜೆ 4.00 ರಿಂದ 5.00 ರವರೆಗೆ ಚಾಸಾ.1 ರವರು ಬಾಡಿಗೆಗೆ ಆರೋಪಿಗಳೊಂದಿಗೆ ವಾಸವಿದ್ದ ಬಾಡಿಗೆ ಮನೆಯಲ್ಲಿ ನಿಪಿ.6 ರಂತೆ ಮಹಜರು ಜರುಗಿಸಿದರು ಎಂದರೆ ಸರಿಯಲ್ಲ. ಸದರಿ ಸಮಯದಲ್ಲಿ ಚಾಸಾ.2 ರವರು ಹಾಜರಿದ್ದು ಕೃತ್ಯ ಸ್ಥಳವನ್ನು ತೋರಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ಆರೋಪಿತರು ಚಾಸಾ.1 ರವರರೊಂದಿಗೆ ಜಗಳ ತೆಗೆದು ಚಾಕುವಿನಿಂದ ಹೊಟ್ಟೆಗೆ ಚುಚ್ಚಿದ ಸ್ಥಳ ಇದೇ ಎಂದು ತೋರಿಸಿದರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.2 ರಂತೆ ಪೊಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.6 ಕ್ಕೆ ಚಾಸಾ.6 ರವರು ಸಹ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು: ಆರೋಪಿತರ ಪರ ವಕೀಲರು ಸಾಕ್ಷಿಯ ಪಾಟೀ ಸವಾಲು ಇಲ್ಲವೆಂದು ನುಡಿದಿರುತ್ತಾರೆ.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯ್ತು)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ಗುರುಪ್ರಸಾಧ ಕುಲಕರ್ಣಿ)
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.

ಸಾಕ್ಷಿಯ ಸಹಿ